ಉ.ವಿಲೇ.ನಂ.ಕಂ.ಪಹಣಿ.ವಿವಾದ/01/2016 17 ದಿನಾಂಕ: 13.10.2016

ಉಪತಶೀಲ್ದಾರರು: ಶ್ರೀ ನಾಗರಾಜ. ಹೆಚ್.
ಉಪತಹಶೀಲ್ದಾರರು
ನಾಡ ಕಛೇರಿ ತಂಬ್ರಹಳ್ಳಿ

| ವಾದಿ (ಶ್ರೀ/ಶ್ರೀಮತಿ) | ಪ್ರತಿವಾದಿ (ಶ್ರೀ/ಶ್ರೀಮತಿ) |
| --- | --- |
| ಶ್ರೀ ರಾಘವೇಂದ್ರ ತಂದೆ ಪರಶುರಾಮ ವಾಸ ಕೆ.ಇ.ಬಿ. ರಸ್ತೆ ರಾಮನಗರ ಹ.ಬೊ.ಹಳ್ಳಿ ಗ್ರಾಮ ಹಬೊಹಳ್ಳಿ ತಾಲೂಕು | ಬಂಗಾರಿ ನಾಗರಾಜ ತಂದೆ ಸೋಮಪ್ಪ ವಾಸ ರಾಮನಗರ, ಹ.ಬೊ ಹಳ್ಳಿ ಗ್ರಾಮ, ಹಬೊಹಳ್ಳಿ ತಾಲೂಕು [ಶ್ರೀ ಶ್ರೀನಿವಾಸ ಎಸ್. ವಕೀಲರು ಹ.ಬೊ.ಹಳ್ಳಿ] |

**ವ್ಯಾಜ್ಯದ ಜಮೀನಿನ ವಿವರ**

| ಗ್ರಾಮ | ಸ.ನಂ. | ವಿಸ್ತೀರ್ಣ |
| --- | --- | --- |
| ನಾರಾಯಣದೇವರ ಕೆರೆ | 749/ಸಿ/5 ಪೈಕಿ | 2.20 ಎಕರೆ |

*****

ತಹಶೀಲ್ದಾರ ... ತಂಬ್ರಹಳ್ಳಿ Office of the Deputy Tahasildar

**ಪೀಠಿಕೆ:**

ಹಗರಿ ಬೊಮ್ಮನಹಳ್ಳಿ ತಾಲೂಕು ತಂಬ್ರಹಳ್ಳಿ ಹೋಬಳಿ ನಾರಾಯಣದೇವರಕೆರೆ ಗ್ರಾಮದ ಸ.ನಂ. 749/ಸಿ/5 ಪೈಕಿ ವಿಸ್ತೀರ್ಣ 2.20 ಎಕರೆ ವಿವಾದಾಸ್ಪದ ಜಮೀನಿಗೆ ಸಂಬಂಧಿಸಿದಂತೆ ವಿಲ್ಲು ನಾಮೆ ದಸ್ತಾವೇಜು ಪತ್ರದ ಪ್ರಕಾರ ಹಕ್ಕುಬದಲಾವಣೆ ಸಂಬಂಧ ಹಕ್ಕು ಬದಲಾವಣೆ ಆದೇಶ ಸಂಖ್ಯೆ:ಹೆಚ್.22/2015-16 ರಲ್ಲಿ ಪ್ರತಿವಾದಿಗಳಿಂದ ತಕರಾರು ಬಂದಿರುವುದರಿಂದ ಪ್ರಕರಣವು ವಿವಾದಸ್ಪದವೆಂದು ಪರಿಗಣಿಸಿ ಕಂದಾಯ ನಿರೀಕ್ಷಕರು ತಂಬ್ರಹಳ್ಳಿ ಇವರು ಪ್ರಸ್ತುತ ಕಡತವನ್ನು ಈ ಕಛೇರಿಗೆ ಸಲ್ಲಿಸಿರುತ್ತಾರೆ.

ಕಡತವನ್ನು ಪರಿಶೀಲಿಸಲಾಗಿ, ನೈಸರ್ಗಿಕ ನ್ಯಾಯದ ಹಿತದೃಷ್ಟಿಯಿಂದ ಪ್ರಕರಣದ ವಿಚಾರಣೆಯನ್ನು ದಿನಾಂಕ:09.06.2016 ರಂದು ನಿಗಧಿಗೊಳಿಸಿ ಉಭಯ ಪಕ್ಷಗಳಿಗೆ ನೋಟೀಸ್ ಮೂಲಕ ತಿಳಿಸಿ ವಿಚಾರಣೆಯನ್ನು ನಡೆಸಲಾಯಿತು.

ವಾದಿಗಳ ಮನವಿ ಮೇರೆಗೆ ವ್ಯಾಜ್ಯದ ಜಮೀನು ಮೂಲತಃ ಶ್ರೀಮತಿ ರತ್ನಮ್ಮ ಗಂಡ ತಿಮ್ಮಪ್ಪ ಇವರ ಜಮೀನಾಗಿದ್ದು, ಸದರಿಯವರು 29.12.2015 ರಂದು ಮರಣ ಹೊಂದಿದ್ದು ಇವರ ಮರಣ ಪೂರ್ವದಲ್ಲಿ ದಿನಾಂಕ:26.09.2015 ರಂದು ನೋಂದಾಯಿತ ವಿಲ್ಲುನಾಮೆ ದಸಾವೇಜು ಸಂಖ್ಯೆ 22/2015-16 ರ ಮೇರೆಗೆ ವಾದಿಗಳ ಹೆಸರಿಗೆ ಖಾತೆ ಮಾಡುವಂತೆ ಕೋರಿ ಮನವಿಯನ್ನು ಸಲ್ಲಿಸಿರುತ್ತಾರೆ.

ಪ್ರತಿವಾದಿಗಳು ದಿ:23.03.2016 ರಂದು ಪ್ರಶ್ನಿತ ಹಕ್ಕುಬದಲಾವಣೆಗೆ ಲಿಖಿತ ತಕರಾರನ್ನು ಸಲ್ಲಿಸಿರುತ್ತಾರೆ. ಹಾಗೂ ಇವರ ಪರವಾಗಿ ಶ್ರೀ ಶ್ರೀನಿವಾಸ ಎಸ್ ವಕೀಲರು ಹ.ಬೊ.ಹಳ್ಳಿ ಇವರು ವಕಾಲತ್ತು ಸಲ್ಲಿಸಿ ವಾದ ಹಾಗೂ ಲಿಖಿತ ತಕರಾರನ್ನು ಸಲ್ಲಿಸಿರುತ್ತಾರೆ. ಸದರಿಯವರ ಪ್ರಕಾರ ಮೂಲ ಪಟ್ಟಾದಾರರಾದ ರತ್ನಮ್ಮ ಇವರ ಸಹೋದರರಾಗಿದ್ದು ಸದರಿಯವರು ಅನಾರೋಗ್ಯದಿಂದ ಮೃತಹೊಂದಿರುತ್ತಾರೆ ಹಾಗೂ ಇವರಿಗೆ ಯಾವುದೇ ಸಂತಾನವಿರುವುದಿಲ್ಲ ಈ ಕಾರಣದಿಂದಾಗಿ ವಾದಿಗಳ ಸಹೋದರಿಯಾದ ನಾಗಮ್ಮ ಮತ್ತು ಇವರ ಗಂಡನಾದ ಪರುಶುರಾಮ ಇವರು ವಿಲ್ಲು ನಾಮೆ

ದಸ್ತಾವೇಜನ್ನು ಸೃಷ್ಟಿಸಿ ವ್ಯಾಜ್ಯದ ಜಮೀನನ್ನು ತಮ್ಮ ಮಗನಾದ ಶ್ರೀ ರಾಘವೇಂದ್ರ ಇವರ ಹೆಸರಿಗೆ ಬರೆಯಿಸಿ ಖಾತೆ ಬದಲಾವಣೆಗಾಗಿ ಮನವಿಯನ್ನು ಸಲ್ಲಿಸಿರುತ್ತಾರೆ. ಸದರಿ ವಿಲ್ಲು ಕಾನೂನು ಬಾಹೀರವಾಗಿದ್ದು ಅರ್ಜಿದಾರರು ಹಾಗೂ ಎದುರುದಾರರ ನಡುವಿನ ವಿವಾದವು ಸಿವಿಲ್ ಸ್ವರೂಪವಾಗಿದ್ದು ಸದರಿ ಸಿವಿಲ್ ನ್ಯಾಯಾಲಯದಲ್ಲಿ ಪರಿಹಾರ ಕಂಡುಕೊಳ್ಳುವಂತೆ ಆದೇಶಿಸಲು ಕೋರಿರುತ್ತಾರೆ.

ವಾದಿಗಳ ಪ್ರಕಾರ ಪ್ರತಿವಾದಿಗಳ ತಕರಾರನ್ನು ಅಲ್ಲಗಳೆಯುತ್ತಾ ವ್ಯಾಜ್ಯದ ಜಮೀನಿನ ಮೂಲ ಪಟ್ಟಾದಾರರು ತಮ್ಮ ಜೀವಿತಾವದಿಯಲ್ಲಿ ದಿನಾಂಕ:16.07.2009 ರಂದು ವಿಲ್ಲುನಾಮೆ ಮೂಲಕ ನೊಂದಾಯಿಸಿ ತದನಂತರ ದಿನಾಂಕ:02.09.2014 ರಂದು ಸದರಿ ವಿಲ್ಲನ್ನು ರದ್ದುಗೊಳಿಸಿರುತ್ತಾರೆ ನಂತರ ದಿನಾಂಕ:26.12.2015ರಂದು ಆಸ್ತಿಯ ಬಗ್ಗೆ ಆತನ ಕೊನೆಯ ವಿಲ್ಲನ್ನು ನಮೊಂದಾಯಿಸಿರುತ್ತಾರೆ ಆದ ಕಾರಣ ಸದರಿ ಪ್ರತಿವಾದಿಗಳ ಅರ್ಜಿಯು ಕಾನೂನಿನನ್ವಯ ಮಾನ್ಯತೆ ಇಲ್ಲವಾದ್ದರಿಂದ ಹಾಗೂ ದಿನಾಂಕ:02.12.2004 ರ ಪಾಲು ವಿಭಾಗದನ್ವಯ ವ್ಯಾಜ್ಯದ ಜಮೀನಿನ ಪಟ್ಟಾದಾರರಾದ ರತ್ನಮ್ಮ ಹಾಗೂ ವಾದಿ ಪ್ರತಿವಾದಿಗಳಿಗೆ ಆಸ್ತಿಗಳು ವಿಭಾಗಗೊಂಡಿರುವುದರಿಂದ ಜಂಟಿ ಕುಟುಂಬ ಎಂಬ ಪ್ರಮೇಯವು ಉದ್ಭವಿಸುವುದಿಲ್ಲವಾದ್ದರಿಂದ ಪ್ರಸ್ತುತ ವ್ಯಾಜ್ಯದ ಜಮೀನನ್ನು ವಿಲ್ಲುನಾಮೆ ದಸ್ತಾವೇಜು ಮೇರಗೆ ವಾದಿಗಳ ಹೆಸರಿಗೆ ಖಾತೆ ಮಾಡಲು ಕೋರಿರುತ್ತಾರೆ.

ಮೇಲ್ಕಂಡ ವಾದಿ ಪ್ರತಿವಾದಿಗಳು ಮಂಡಿಸಿದ ವಾದ ಪ್ರತಿವಾದವನ್ನು ಆಲಿಸಲಾಗಿ ಹಾಗೂ ಕಡತದಲ್ಲಿ ಲಭ್ಯವಿರುವ ದಾಖಲೆಗಳನ್ನು ಪರಿಶೀಲಿಸಲಾಗಿ ವಾದಿಗಳು ವಿಲ್ಲುನಾಮೆ ದಸ್ತಾವೇಜು ಮೇರೆಗೆ ಹಕ್ಕು ಬದಲಾವಣೆಗಾಗಿ ಮನವಿ ಸಲ್ಲಿಸಿದ್ದು, ಪ್ರತಿವಾದಿಗಳು ಸದರಿ ವಿಲ್ಲು ಕಾನೂನು ಬಾಹೀರವಾಗಿರುವುದಾಗಿ ತಕರಾರು ಸಲ್ಲಿಸಿದ್ದು ಕಾರಣ ಸದರಿ ವಿವಾದಿತ ವಿಲ್ಲು ನಾಮೆ ದಸ್ತಾವೇಜಿನ ನೈಜತೆ ಬಗ್ಗೆ ನಿರ್ಧಾರ ಕೈಗೊಳ್ಳುವುದು ಈ ನ್ಯಾಯಾಲಯದ ವ್ಯಾಪ್ತಿಗೆ ಮೀರಿರುವುದರಿಂದ ಹಾಗೂ ಪ್ರಕರಣವು ಸಿವಿಲ್ ಸ್ವರೂಪವಾಗಿರುವುದರಿಂದ ಉಭಯರು ಸಿವಿಲ್ ನ್ಯಾಯಾಲಯದಲ್ಲಿ ಪರಿಹಾರ ಕಂಡುಕೊಳ್ಳುವಂತೆ ಸೂಚಿಸಿ ಆದೇಶಿಸುವುದು ಸೂಕ್ತವೆಂದು ಕಂಡುಬಂದಿರುವುದರಿಂದ ಈ ಕೆಳಕಂಡಂತೆ

**-: ಆದೇಶ :-**

ಪೀಠಿಕೆಯಲ್ಲಿ ವಿವರಿಸಿದ ಸಂದರ್ಭ, ವಾಸ್ತವಾಂಶ, ಹಿನ್ನೆಲೆ ಮತ್ತು ಕಾರಣಗಳ ಆಧಾರದ ಮೇರೆಗೆ ಹಗರಿ ಬೊಮ್ಮನಹಳ್ಳಿ ತಾಲೂಕು ತಂಬ್ರಹಳ್ಳಿ ಹೋಬಳಿ ನಾರಾಯಣದೇವರಕೆರೆ ಗ್ರಾಮದ ಸ.ನಂ. 749/ಸಿ/5 ಪೈಕಿ ವಿಸ್ತೀರ್ಣ 2.20 ಎಕರೆ ವಿವಾದಾಸ್ಪದ ಜಮೀನಿಗೆ_ಸಂಬಂಧಿಸಿದಂತೆ ಉಭಯ ಪಕ್ಷಕಾರರು ಅಗತ್ಯ ದಾಖಲೆಗಳೊಂದಿಗೆ ಪ್ರದತ್ತ ಪ್ರಾಧೀಕಾರಕ್ಕೆ ಮನವಿ ಸಲ್ಲಿಸಿ ಪರಿಹಾರ ಕಂಡುಕೊಳ್ಳುವಂತೆ ಸೂಚಿಸುತ್ತಾ ಪ್ರಸ್ತುತ ಪ್ರಕರಣವನ್ನು ಈ ಹಂತದಲ್ಲಿ ಮುಕ್ತಾಯಗೊಳಿಸಿ ಆದೇಶಿಸಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ, ಗಣಕೀಕರಣ ಮಾಡಿಸಿ, ತಪ್ಪುಗಳನ್ನು ಸರಿಪಡಿಸಿ ಈ ದಿನ ದಿನಾಂಕ: 13.10.2016 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಿದೆ.

13/10

[ನಾಗರಾಜ.ಹೆಚ್]
ಉಪ ತಹಶೀಲ್ದಾರರು,
ನಾಡ ಕಛೇರಿ, ತಂಬ್ರಹಳ್ಳಿ
ತಂಬ್ರಹಳ್ಳಿ

1. ವಾದಿ ಮತ್ತು ಪ್ರತಿವಾದಿಗಳಿಗೆ.
2. ಭೂಮಿ ಶಿರಸ್ತೆದಾರರು, ತಾಲೂಕು ಕಛೇರಿ ಹಗರಿ ಬೊಮ್ಮನಹಳ್ಳಿ ಇವರಿಗೆ ಸೂಕ್ತ ಕ್ರಮಕ್ಕಾಗಿ ರವಾನಿಸಿದೆ.

20/10/16